ಕವನಗಳನ್ನು ಪದೇ ಪದೇ ಕೇಳಿಸಿಕೊಂಡು ಅವರಿಗೂ ಕೋಮಲವಾದ ಬದಲಾವಣೆಯ ಮಾರ್ಗವಾಗಿ ಪ್ರೀತಿ ಪದ್ಯಗಳು ಅಗತ್ಯವೆನಿಸಿತ್ತು.

ಮಾನಸಿಕ ಗಟ್ಟಿತನಕ್ಕೆ, ಸದೃಢತೆಗೆ, ಬಲಿಷ್ಠತನಕ್ಕೆ ವಿಚಾರವಾದ, ಆಲೋಚನಾಪರ ಬರವಣಿಗೆಗಳು ಎಷ್ಟು ಮುಖ್ಯವೋ, ಇವನ್ನು ಅಷ್ಟೇ ಬಲವಾಗಿ ಪೋಷಿಸಲು ಮಾನವೀಯ ಕಾಳಜಿ, ಆಹ್ಲಾದ, ನಿರಾಳತೆ, ಸುಕೋಮಲವಾದ ಭಾವ ತೀವ್ರತೆಗೆ ಆ ವಿಚಾರವಾದಕ್ಕೆ ಅಂತಃಕರಣವಿರುವ ಪ್ರೀತಿ ಪ್ರೇಮವೂ ಅಷ್ಟೇ ಮುಖ್ಯವಾಗುತ್ತದೆ. ಗಂಭೀರತೆ ಚಿಂತನೆಯನ್ನು ಹುಟ್ಟುಹಾಕಬಲ್ಲುದಾದರೆ ಒಲವಿನ ಕವಿತೆಗಳು ಅದಕ್ಕೆ ಮಾರ್ದವತೆಯನ್ನೂ ಕಾಳಜಿಯನ್ನೂ ಲೇಪಿಸಬಲ್ಲವು.

'ನೀನಿಲ್ಲದೇ ನನಗೇನಿದೆ', 'ತೂಗು ಮಂಚದಲ್ಲಿ ಕೂತು', 'ಎಲ್ಲಿ ಜಾರಿತೋ ಮನವು', 'ಬಾ ಚಕೋರಿ ಚಂದ್ರಮಂಚಕೆ', 'ಸಿರಿಗೆರೆಯ ನೀರಲ್ಲಿ, ಬಿರಿದ ತಾವರೆಯಲ್ಲಿ ಕೆಂಪಾಗಿ ನಿನ್ನ ಹೆಸರು', 'ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ' ಮೊದಲಾದ ಮಿಂಚಿನ ಸಾಲುಗಳಂತಹ ಸಾಲುಗಳುಳ್ಳ ಪದ್ಯಗಳನ್ನ ಮೊರೆವ ಏಕಾಂತದಲ್ಲಿ ಕಾಂತ ಅಥವಾ ಕಾಂತೆಯನ್ನು ಆರಾಧಿಸುತ್ತ, ನೆನಪಿಸಿಕೊಳ್ಳುತ್ತಾ ಸೊಗಸಾದ ಸಂಗೀತದೊಂದಿಗೆ ಆಲಿಸುತ್ತಿದ್ದರೆ ಯಾವ ಹೃದಯ ತಾನೆ ಸೊಂಪಾಗಿ ನಿಟ್ಟುಸಿರಿನೊಂದಿಗೆ ಆರ್ದ್ರಗೊಳ್ಳಲಾರದು. ಕೆನ್ನೆ ಕೆಂಪೇರಲಾರದು. ಮೊಗ ಮುಂಜಾವಿನ ಅರೆಬಿರಿದ ಮಲ್ಲಿಗೆಯಂತೆ ಅರಳಲಾರದು. ಇಷ್ಟೊಂದು ಆಪ್ತವಾಗಿ, ಮನಸ್ಸನ್ನು ತಾಗಿ ವಿಕಸನಗೊಳಿಸುವ ಕಾವ್ಯ, ಘನತೆಗೆ ಹೇಗೆ ತಾನೇ ಕುಂದುತರಲು ಸಾಧ್ಯ?

ಇನ್ನು ಕಾಮದ ಕವಿತೆಗಳನ್ನು ನೆನಪಿಸಿಕೊಳ್ಳುವುದಾದರೆ ಗಂಗಾಧರ ಚಿತ್ತಾಲರ 'ಕಾಮಸೂತ್ರ' ಕವಿತೆ, ಕುವೆಂಪು ಅವರ 'ಷೋಡಶಿ' ಕವನ ಎದೆಯಕವಾಟಗಳನ್ನು ಝಲ್ಲೆನಿಸಲಾರವೇ? 'ದಿನವೊಂದರೊಳೆ ನಿನ್ನ ಎದೆಯ ರಸವನು ಹೀರಿ ಸರ್ವಸ್ವವನು ನಲ್ಲೆ, ಸುಲಿಯಬಲ್ಲೆ... ... ... ... ಸಂಯೋಗವೊಂದರೊಳೆ ನಿನ್ನ ನುಣ್ಣನೆ ನೊಣೆದು ರಸಪೂರ್ಣ ಶೂನ್ಯತೆಗೆ ಕಳುಹಬಲ್ಲೆ?' ಎನ್ನುವ ಕುವೆಂಪು, 'ಜೀವ ಝಲ್ಲೆನೆ ಪೂರ್ಣ ನಗ್ನರಾಗಿ, ಒಬ್ಬರಲ್ಲೊಬ್ಬರು ನಿಮಗ್ನರಾಗಿ, ಕೊಂಬೆ ಕೊಂಬೆಗೆ ತೂಗಿ ಬೀಗಿ, ಬಯಕೆಯ ಹಣ್ಣು ಹೊಡೆಯೆ ಕಣ್ಣು' ಎನ್ನುತ್ತಾ ಬೆಚ್ಚಿ ಬೀಳಿಸುವ ಪದಲೋಲುಪತೆಯ ಗಂಗಾಧರ ಚಿತ್ತಾಲರ ಕವಿತೆ ಮೈಮನ ಬೆಚ್ಚಗಾಗುವಂತೆ ಮಾಡದಿರದೇ! ಇಂತಹ ಕವಿತೆಗಳು ಪದೇ ಪದೇ ಕಾಡಿ, ನಿರ್ದಿಷ್ಟ ಘಟನೆಗಳಲ್ಲಿ ನೆನಪಾಗಿ, ಆ ಸಂದರ್ಭಗಳನ್ನು ವರ್ಣಿಸಲು ಬೇರೆ ಪದಗಳೇ ಹೊಳೆಯದಂತೆ ಮಾಡಿಬಿಡುತ್ತವೆ.

ನವಿರಾದ ಭಾವತೀವ್ರತೆಯನ್ನು ಹುಟ್ಟಿಸುವ, ಮನಸ್ಸನ್ನು ಹದಗೊಳಿಸುವ ಮಾನವ ಪ್ರೇಮವನ್ನು ಪ್ರೇರೇಪಿಸುವ, ಆ ಮೂಲಕ ಶಾಂತಿ ಸೌಹಾರ್ದತೆಯನ್ನು ಕಾಪಿಡುವ ಬರಹ ಅಥವಾ ಪದ್ಯಗಳನ್ನು ರಚಿಸಲು ವಯಸ್ಸಿನ ಹಂಗೆಲ್ಲಿದೆ. ಮಾನವ ಮಾಗುವ ಹೊತ್ತಿನಲ್ಲೆ ಪ್ರೇಮ ಮತ್ತಷ್ಟು ಚಿಗುರಾಗಿ ಹುರುಪಾಗಿ ವಿಶಾಲವಾಗಿ ಹರಡಿ ಜೀವನಪ್ರೀತಿಯನ್ನು ಹೆಚ್ಚಿಸುವುದು. ತನ್ನ ಸುತ್ತೆಲ್ಲವನ್ನೂ ತಂಪಾಗಿಡುವುದು. 'ಪ್ರೀತಿಗೆ ವಯಸ್ಸಿನ ಮಿತಿಯೆಲ್ಲಿದೆ?' ಮಾಗಿದ ಅನುಭವಕ್ಕೆನೇ ಝೇಂಕರಿಸುವಂತಹ, ಮಿಡಿಯುವಂತಹ ಸಾಲುಗಳನ್ನು ಸೃಷ್ಟಿಸಲು ಸಾಧ್ಯವೇನೋ? ಇನ್ನು ಸೂಫಿಗಳು ಹೆಣೆದ ಅದ್ಭುತ ಪ್ರೇಮಕಸೂತಿಗೆ, ಜಾನಪದರ ಅಪೂರ್ವ ತ್ರಿಪದಿಗಳ ಅನುರಾಗದ ಅಭಿವ್ಯಕ್ತಿಗಳಿಗೆ ಸಾಟಿಯುಂಟೇ? ಚಲನಚಿತ್ರಗಳಲ್ಲಿನ ಮೈಮರೆಸುವ ಹಾಡುಗಳನ್ನು ಮರೆತವರುಂಟೆ!

ಪ್ರೀತಿ ಪ್ರೇಮಗಳೆಲ್ಲ ಮಾನವ ಸಹಜ ಭಾವಗಳೆಂದು ಒಪ್ಪಿಕೊಳ್ಳುತ್ತಲೇ, ಬದುಕಿಗೆ ಸಂಜೀವಿನಿಯಂತೆ ಸ್ಫೂರ್ತಿ ಹುಟ್ಟಿಸಬಲ್ಲದು ಎಂದು ಮಾತನಾಡುತ್ತಲೇ, ಉದಾರ ಮಾನವತೆಯನ್ನ ತನ್ನಲ್ಲೇ ಯಥೇಚ್ಛವಾಗಿ ಒಳಗೊಂಡ, ಜನ್ಮತಃ ಕರುಣೆಯ ಸ್ವಭಾವ ಅಳವಡಿಕೆಯಾದ ಮಹಿಳೆಯರು ಈ ಅನುರಾಗದ ಆಲಾಪಗಳನ್ನು ಹಾಡಿದ್ದು ಕಡಿಮೆಯೇ. ಕಳಂಕದ ಭೀತಿಯೋ, ಸಾಮಾಜಿಕವಾಗಿ ಅಪಮೌಲ್ಯಗೊಳ್ಳುವ ಭಯವೋ, ಲೇವಡಿಗೊಳಗಾಗುವ ಶಂಕೆಯೋ, ಚಾರಿತ್ರ್ಯಹೀನ ಪಟ್ಟದ